ಮಾಡಿಸುವುದು. ಅವನು ಎಷ್ಟೇ ವರ್ಷ ಕೆಲಸ ಮಾಡಿರಲಿ ಇವತ್ತೇ ಆಗಿರಲಿ, ನಾಳೆ ಆಗಿರಲಿ, ಅವನನ್ನು ಕೆಲಸದಿಂದ ವಜಾ ಮಾಡುತ್ತೇನೆ.

ಶ್ರೀ ಹೆಚ್.ಎಸ್. ಪಾಟೀಲ್ ; ಮಾನ್ಯ ಸಚಿವರ ಉತ್ತರದಿಂದ ಸಮಾಧಾನ ಆಯಿತು. ಆದರೆ ನಿರ್ದಿಷ್ಟವಾದ ಒಂದು ಪ್ರಕರಣವನ್ನು ಲಿಖಿತ ಮೂಲಕ ಅಯಾಯ ಅಧಿಕಾರಿ ಬಗ್ಗೆ ತಮಗೆ ನೇರವಾಗಿ ಕೊಡುತ್ತೇನೆ. ತಪ್ಪಿತಸ್ಥ ಅಧಿಕಾರಿ ಮೇಲೆ ತಾವು ಕ್ರಮ ತೆಗೆದುಕೊಳ್ಳಿ. ಮುಂದಿನ ವರ್ಷ ಇವರನ್ನೆಲ್ಲಾ ಸಾರಾಸಗಟಾಗಿ ನಮ್ಮ ತಾಲ್ಲೂಕಿನಿಂದ ಎತ್ತಂಗಡಿ ಮಾಡಿದರೆ ನಮ್ಮ ತಾಲ್ಲೂಕಿಗೆ ಬಹಳ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಲಿಖಿತ ರೂಪವಾಗಿ ಸ್ವಲ್ಪ ದಿವಸದಲ್ಲಿಯೇ ಕೊಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : ಸದಸ್ಯರಿಗೆ ಅಭಿನಂದನೆಗಳು. ನಿರ್ದಿಷ್ಟವಾದ ಆಪಾದನೆಗಳನ್ನು ಕೊಟ್ಟರೆ ತಕ್ಷಣ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿಳಿಗಿರಿರಂಗಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನ.

3560 - ಶ್ರೀ ಎಂ. ಶ್ರೀನಿವಾಸಯ್ಯ (ಟಿ, ನರಸೀಪುರ): ಮಾನ್ಯ ಧಾರ್ಮಿಕ ಮತ್ತು ದತ್ತಿ ಖಾತೆ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮೈಸೂರು ಜಿಲ್ಲೆಯಲ್ಲಿರುವ ಶ್ರೀ ಬಿಳಿಗಿರಿರಂಗ ಸ್ವಾಮಿ ಬೆಟ್ಟದಲ್ಲಿರುವ ದೇವಸ್ಥಾನವು ಸರ್ಕಾರದ ವತಿಯಿಂದ ನಡೆಯುತ್ತಿದೆಯೇ?*

2) *ಹಾಗಿದ್ದಲ್ಲಿ ಪ್ರಸಿದ್ಧ ಪೂಜಾ ಸ್ಥಳವಾಗಿದ್ದು ಮತ್ತು ಯಾತ್ರಿಕ ಸ್ಥಳವಾಗಿರುವುದರಿಂದ ಭಕ್ತಾದಿಗಳು ಬಂದು ತಂಗಲು ನೀರು ಮತ್ತು ವಸತಿ ಸೌಕರ್ಯವನ್ನು ಒದಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೇ?*

3) *ಇಲ್ಲವಾದಲ್ಲಿ ಪ್ರೇಕ್ಷಣೀಯ ಹಾಗೂ ಪೌರಾಣಿಕ ಐತಿಹಾಸಿಕ ದೇವಸ್ಥಾನದ ಜೀರ್ಣೋದ್ಧಾರ ಮಾಡುವಲ್ಲಿ ಸರ್ಕಾರ ಯಾವ ರೀತಿ ತುರ್ತು ಕ್ರಮ ಕೈಗೊಳ್ಳುತ್ತದೆ?*

4) *ಸದರಿ ಬೆಟ್ಟದಲ್ಲಿ ಭಕ್ತಾದಿಗಳು ಬಂದು ಇದ್ದು ಹೋಗಲು ತಮ್ಮ ಸ್ವಂತ ಖರ್ಚಿನಲ್ಲಿ ಮಂಟಪಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ನೀಡಲು ಅವಕಾಶವಿದೆಯೇ?*

5) *ಹಾಗಿದ್ದಲ್ಲಿ ಯಾರ ಮುಖಾಂತರದಿಂದ ನಿವೇಶನಗಳನ್ನು ಪಡೆದುಕೊಳ್ಳಬಹುದು?*

ಶ್ರೀ ರಾಜಾಅಮರೇಶನಾಯಕ (ಧಾರ್ಮಿಕ ಮತ್ತು ದತ್ತಿಖಾತೆ ರಾಜ್ಯ ಸಚಿವರು):

1) ಹೌದು.

2) (1) ದೇವಸ್ಥಾನಕ್ಕೆ ಸೇರಿದ 3 ಕೊಠಡಿಗಳ ವಸತಿ ಸೌಕರ್ಯವಿದೆ.

(2) ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ಇದೆ.

(3) ಅರಣ್ಯ ಇಲಾಖೆಗೆ ಸೇರಿದ ವಸತಿ ಇದೆ 1 ಕೊಳವೆ ಬಾವಿ ಇದೆ.

3) ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಪ್ರಸ್ತಾವನೆ ಬಂದ ನಂತರ ತುರ್ತು ಕ್ರಮ ತೆಗೆದುಕೊಳ್ಳಲಾಗುವುದು.

4) ಇಲ್ಲ.

5) ಉದ್ಭವಿಸುವುದಿಲ್ಲ.

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿರುವ ಶ್ರೀ ಬಿಳಿಗಿರಿರಂಗಸ್ವಾಮಿ ಬೆಟ್ಟದ್ದಲ್ಲಿರುವ ದೇವಸ್ಥಾನವು ಸರ್ಕಾರದ ವತಿಯಿಂದ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ 'ಹೌದು' ಎಂದು ಸಚಿವರು ಉತ್ತರ ಕೊಟ್ಟಿದ್ದಾರೆ.

ಹಾಗಿದ್ದಲ್ಲಿ ಪ್ರಸಿದ್ಧ ಪೂಜಾ ಸ್ಥಳವಾಗಿದ್ದು ಭಕ್ತಾದಿಗಳು ಬಂದು ತಂಗಲು ವಸತಿ ಸೌಕರ್ಯಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 3 ವಸತಿ ಗೃಹಗಳು ಇದೆ. ಅದರಲ್ಲಿ ಭಕ್ತಾದಿಗಳು ಉಳಿದುಕೊಳ್ಳುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ. ಆದರೆ ನಾನು ಕೇಳಿರತಕ್ಕ ಪ್ರಶ್ನೆ ಸಾವಿರಾರು ಜನ ಭಕ್ತಾದಿಗಳು ಅಲ್ಲಿ ಹೋಗಿ ಒಂದೆರಡು ದಿವಸ ತಂಗುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಧಾರ್ಮಿಕ ದತ್ತಿ ಸಚಿವರ ಪರವಾಗಿ) : ಅಲ್ಲಿರತಕ್ಕಂಥಾದ್ದು ಮೂರು ಗೆಸ್ಟ್‌ಹೌಸ್‌ಗಳು ಉಳಿದಂಥ ಡಾರ್ಮಿಟರೀಸ್ ಅಥವಾ ಧರ್ಮಶಾಲೆಗಳು ಮುಂತಾದ ಯಾವ ಕಟ್ಟಡಗಳೂ ಅಲ್ಲಿ ಇಲ್ಲ, ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಪ್ರಪೋಸಲ್‌ನ್ನು ಅಲ್ಲಿ ಡೆಪ್ಯುಟಿ ಕಮಿಶನರ್‌ರವರಿಗೆ ಕಳುಹಿಸಿದರೆ ಸರಕಾರದವರು ಅದನ್ನು ಪರಿಶೀಲಿಸುತ್ತಾರೆ.

ಶ್ರೀ ಎಂ. ಶ್ರೀನಿವಾಸಯ್ಯ : ಮಾನ್ಯ ಅಧ್ಯಕ್ಷರೆ, ಮಹದೇಶ್ವರ ಬೆಟ್ಟದಲ್ಲಿ ಹೇಗೆ ಸಾವಿರಾರು ಜನ ಭಕ್ತಾದಿಗಳು ಹೋಗುವುದಕ್ಕೆ ಅವಕಾಶ ಇದೆ ಆ ರೀತಿಯ ಒಂದು ಸೌಲಭ್ಯವನ್ನು ಇಲ್ಲಿಯೂ ಸರಕಾರದವರು ಕಲ್ಪಿಸಿಕೊಡುತ್ತೀರಾ? ಒಂದು ವೇಳೆ ಸರಕಾರದಿಂದ ಆಗದಿದ್ದ ಪಕ್ಷದಲ್ಲಿ ಭಕ್ತಾದಿಗಳು ಮಾಡಿಕೊಳ್ಳುವುದಕ್ಕೆ ಮುಂದೆ ಬಂದರೆ ಅದಕ್ಕೆ ಸರಕಾರದವರು ಅವಕಾಶವನ್ನು ಮಾಡಿಕೊಡುತ್ತಾರೆಯೇ ಎಂದು ಕೇಳಬಯಸುತ್ತೇನೆ. ಈ ಬಗ್ಗೆ ದಯವಿಟ್ಟು ಸರಕಾರದ ನಿಲುವನ್ನು ತಿಳಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರ (ಡಿ) ಪ್ರಶ್ನೆಯಲ್ಲಿ ಇಲ್ಲವಾದಲ್ಲಿ, ಸ್ವಂತಖರ್ಚಿನಲ್ಲಿ ಮಂಟಪ ಕಟ್ಟಿಕೊಳ್ಳಲು ನಿವೇಶನ ನೀಡಲು ಅವಕಾಶ ಇದೆಯೇ ಎಂದು ಕೇಳಿದ್ದಾರೆ, ಒಂದು ವೇಳೆ ಭಕ್ತಾದಿಗಳು ಕಟ್ಟಿಕೊಳ್ಳುವುದಾದಲ್ಲಿ ನಿವೇಶನ ನೀಡಲು ಸರಕಾರಕ್ಕೆ ಇರುವ ತೊಂದರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಇರುವ ಜಾಗ ಕೇವಲ ಎರಡು ಎಕರೆಗಳು ಮಾತ್ರ ಅದರಲ್ಲಿ ಕಾಂಪೌಂಡ್ ಹಾಕಿ ಎಂಟೈರ್ ಟೆಂಪಲ್‌ಗೆ ಮಾತ್ರ ಸೀಮಿತವಾಗಿ ಇಟ್ಟಿದ್ದಾರೆ. ಇನ್ನು ಇದು ಫಾರೆಸ್ಟ್ ಲ್ಯಾಂಡ್ ಇದ್ದ ಕಾರಣ ಅದನ್ನು ಕೊಡುವುದಕ್ಕೆ ನಮಗೆ ಅಧಿಕಾರ ಇಲ್ಲ, ಆ ವಿಚಾರದಲ್ಲಿ ಕೇಂದ್ರಸರಕಾರಕ್ಕೆ ಬರೆಯ ಬೇಕಾಗುತ್ತದೆ. ಆದುದರಿಂದಲೇ ನಿವೇಶನವನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ.

ಬೆಂಗಳೂರಿನ ಸುತ್ತಮುತ್ತ ಗಿಡಮರಗಳನ್ನು ಬೆಳಸುವುದರ ಬಗ್ಗೆ.

3568 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜಕ್ಷೇತ್ರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಅರಣ್ಯ ಇಲಾಖೆ ಬೆಂಗಳೂರು ನಗರ ಮತ್ತು ಸುತ್ತ ಮುತ್ತ ಅರಣ್ಯ ಬೆಳೆಸಲು ವಿಶೇಷ ಸೆಲ್ ರಚಿಸಲು ಹಣ ಮೀಸಲಿಟ್ಟಿದೆಯೇ?*

ಆ) *ರಾಜ್ಯದ ಬೇರೆ ಬೇರೆ ಪ್ರಮುಖ ನಗರಗಳಿಗೂ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ?*

ಇ) *ಇಲ್ಲದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು.*

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಬೆಂಗಳೂರು ಹಾಗೂ ಸುತ್ತಮುತ್ತಲಿನ ಕಲುಷಿತ ವಾತಾವರಣವನ್ನು ನಿರ್ಮಲಗೊಳಿಸಲು ಅರಣ್ಯ ಇಲಾಖಾವತಿಯಿಂದ 1982ರಲ್ಲಿ ಒಂದು ವಿಭಾಗವನ್ನು ರಚಿಸಿದೆ. ಈ ಸೃಷ್ಟಿಸಿದ ವಿಭಾಗಕ್ಕೆ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯಿಂದ